# ಕರ್ನಾಟಕ ವಿಧಾನ ಪರಿಷತ್ತು

## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆ ಚುನಾವಣಾ ಕ್ಷೇತ್ರ) ಇವರು ನಿಯಮ-72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

**ಪ್ರಶ್ನೆ:**

ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ (NKUSIP) ಯೋಜನೆಯಡಿ ಸುಮಾರು 96.00 ಕೋಟಿ ವೆಚ್ಚದಲ್ಲಿ ಸಿಂಧನೂರು ನಗರಕ್ಕೆ 24x7 ಕುಡಿಯುವ ನೀರು ಸರಬರಾಜು ಮಾಡಲು ಕೈಗೊಳ್ಳಲಾಗಿರುವ ಕಾಮಗಾರಿಯು 2014 ರಲ್ಲಿ ಪ್ರಾರಂಭಗೊಂಡರೂ ಈವರೆಗೆ ಸಿಂಧನೂರು ನಗರದ ನಿವಾಸಿಗಳಿಗೆ 24x7 ಕುಡಿಯುವ ನೀರು ಪೂರೈಕೆಯಾಗದಿರುವ ಬಗ್ಗೆ ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನಾ ಸಚಿವರ ಗಮನ ಸೆಳೆದಿರುವ ಕುರಿತು.

**ಉತ್ತರ :**

ಸಿಂಧನೂರು ನಗರಕ್ಕೆ 24x7 ಕುಡಿಯುವ ನೀರು ಸರಬರಾಜು ಮಾಡಲು ಕೈಗೊಳ್ಳಲಾಗಿರುವ ಕಾಮಗಾರಿಯ ವಿವರಗಳು ಈ ಕೆಳಕಂಡಂತಿರುತ್ತದೆ:

1. **ಎನ್‌ಕೆಯುಎಸ್‌ಐಪಿ ಯೋಜನೆಯಡಿ** ಸಿಂಧನೂರು ನಗರದಲ್ಲಿ 24x7 ಕುಡಿಯವ ನೀರು ಸರಬರಾಜು ಕಾಮಗಾರಿಯ ಸಗಟು ನೀರು ಪೂರೈಕೆ ಅಭಿವೃದ್ಧಿ ಸಹಿತ ಗುತ್ತಿಗೆಯನ್ನು ಮೆ|| ಎಸ್‌ಪಿಎಂಎಲ್ ಇನ್ಫ್ರಾ ಲಿಮಿಟೆಡ್, ನವ ದೆಹಲಿ ರವರಿಗೆ ದಿನಾಂಕ:17/12/2014 ರಂದು ಯೋಜನಾ ಮೊತ್ತ ರೂ.80.66 ಕೋಟಿಗಳಿಗೆ ನೀಡಲಾಗಿದೆ (ಕಾರ್ಯಚರಣೆ ಮತ್ತು ನಿರ್ವಹಣೆ ಮೊತ್ತ ರೂ.18.63 ಕೋಟಿಗಳು). ಪರಿಷ್ಕೃತ ಗುತ್ತಿಗೆ ಯೋಜನಾ ಮೊತ್ತ ರೂ.96.00 ಕೋಟಿ (ಫೇಸ್-1). ಕಾಮಗಾರಿಗಳನ್ನು ಪೂರ್ಣಗೊಳಿಸಲು ಕರಾರಿನಂತೆ ದಿನಾಂಕ:16/06/2017 ಕ್ಕೆ ನಿಗಧಿಪಡಿಸಲಾಗಿತ್ತು.

- ವಿನ್ಯಾಸಿತ ಜನಸಂಖ್ಯೆ (2046) : 2,52,722
- ವಾರ್ಡ್ ಸಂಖ್ಯೆ : 31
- ಕುಡಿಯುವ ನೀರಿನ ಮೂಲ : ತುಂಗಭದ್ರ ಎಡದಂಡೆ ಕಾಲುವೆ.

ಈ ಕಾಮಗಾರಿಯಡಿ ಸಗಟು ಹಾಗೂ ವಿತರಣಾ ವ್ಯವಸ್ಥೆ ಅಭಿವೃದ್ಧಿ ಮಾಡಲು 2 ಭಾಗಗಳಿರುತ್ತವೆ.

## 2.ಸಗಟು ಕುಡಿಯುವ ನೀರು ಪೂರೈಕೆ ಕಾಮಗಾರಿ:.

| ಕ್ರ ಸಂ | ಕಾಮಗಾರಿ ವಿವರ | ಗುರಿ | ಪ್ರಗತಿ | ಬಾಕಿ |
|---|---|---|---|---|
| 1 | ಜಲಸಂಗ್ರಹಗಾರ (IR) | 1 | 1 (100%) | -- |
| 2 | ಮೂಲ ಸ್ಥಾವರ | 1 | 1 (100%) | -- |
| 3 | ಯಂತ್ರೋಪಕರಣಗಳು | 2 ಸೆಟ್ | 2 (100%) | -- |
| 4 | 700 MM ವ್ಯಾಸದ BWSC Pipe (ಕಿಮೀ) | 17.5 | 17.50 (100%) | -- |

| ಕ್ರ ಸಂ | ಕಾಮಗಾರಿ ವಿವರ | ಗುರಿ | ಪ್ರಗತಿ | ಬಾಕಿ |
|---|---|---|---|---|
| 5 | 10 MLD ಜಲಶುದ್ಧೀಕರಣಾಗಾರ | 1 | 1 (95%) | 5% (finishing works) |
| 6 | 500 MM to 250 MM DI Rising Main (ಕಿಮೀ) | 18.3 | 18.3 (100%) | -- |
| 7 | ಮೇಲೆತ್ತರದ ಜಲಸಂಗ್ರಹಗಾರ (10LL–3 nos.+ 5LL – 2 nos.) | 5 | 5 (95%) | ಚಾಲನೆ ಗೊಳಿಸಲಾಗಿದೆ. |

ಸಗಟು ಕುಡಿಯುವ ನೀರು ಪೂರೈಕೆ ಕಾಮಗಾರಿಯು 2021 ರಲ್ಲಿ ಪೂರ್ಣಗೊಂಡಿದ್ದು, ಇದರಿಂದ ಸಗಟು ನೀರು ಪೂರೈಕೆಯಲ್ಲಿ 6 ಎಂ.ಎಲ್.ಡಿ ಯಿಂದ 16 ಎಂ.ಎಲ್.ಡಿಗೆ ಹೆಚ್ಚಳವಾಗಿರುತ್ತದೆ. ಪ್ರಸ್ತುತ ನಗರಸಭೆ ವತಿಯಿಂದ ಕಾರ್ಯಚರಣೆ ಮತ್ತು ನಿರ್ವಹಣೆಯನ್ನು ನಿರ್ವಹಿಸಲಾಗುತ್ತಿದೆ.

### 3. **ವಿತರಣಾ ವ್ಯವಸ್ಥೆ ಕಾಮಗಾರಿ :**

ಪ್ರಗತಿ ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ. | ಕಾಮಗಾರಿ ವಿವರ | ಗುರಿ | ಪ್ರಗತಿ | ಬಾಕಿ |
|---|---|---|---|---|
| 1 | **ವಿತರಣಾ ಜಾಲ (ಹೆಚ್‌ಡಿಪಿಇ) ಕಿ.ಮೀ** | | | |
| | 1.1 ಸರಬರಾಜು | 206.07 | 206.07 (100%) | - |
| | 1.2 ಜೋಡಣೆ | | 205.5 (99.7%) | 1.45 |
| | 1.3 ಚಾಲನೆ | | 116.96 (56.7%) | 89.54 |
| 2 | **ಮನೆ ಸಂಪರ್ಕ(ಸಂಖ್ಯೆ)** | | | |
| | 2.1 ಸರಬರಾಜು | 13946 | 13946 (100%) | - |
| | 2.2 ಜೋಡಣೆ | | 12733 (91.3%) | 1213 |
| | 2.3 ಚಾಲನೆ | | 8941 (64.1%) | 5005 |
| 3 | Valves (nos.) | 670 | 251 (37.4%) | 419 |
| 4 | Flowmeters (nos.) | 12 | 9 (75%) | 3 |
| 5 | Instrumentation (nos.) fixing & commissioning | 35 | 0 | 35 |

ನಗರವನ್ನು 7 ವಿತರಣಾ ವಲಯಗಳಾಗಿ ವಿಂಗಡಿಸಲಾಗಿದ್ದು, 2 ವಲಯಗಳಲ್ಲಿ (90%), 2 ವಲಯಗಳಲ್ಲಿ (50%) ಹೊಸ ವಿತರಣಾ ಜಾಲದಿಂದ ನೀರು ಪೂರೈಕೆಯಾಗುತ್ತಿದೆ. ಉಳಿದ 3 ವಲಯಗಳಲ್ಲಿ ವಿತರಣಾ ಜಾಲದಲ್ಲಿ 730 ಸಂಖ್ಯೆ ಲಿಂಕಿಂಗ್ ಕಾಮಗಾರಿಗಳು ಬಾಕಿ ಇರುತ್ತದೆ.

ಇದುವರೆಗೆ ಒಟ್ಟಾರೆ ಭೌತಿಕವಾಗಿ ಶೇ.85 ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ರೂ.86.74 ಕೋಟಿ ವೆಚ್ಚ ಮಾಡಲಾಗಿದೆ.

**4. ಗುತ್ತಿಗೆದಾರರಿಂದ ವಿಳಂಭ ಹಾಗೂ ನ್ಯಾಯಾಲಯದ ಪ್ರಕರಣ:**

ಡಿಸಂಬರ್ 2022 ರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಿದ ಕಾರಣ ಗುತ್ತಿಗೆದಾರರಿಗೆ ಕರಾರಿನ ನಿಯಮಾನುಸಾರ ದಂಡ ವಿಧಿಸಿ ಗುತ್ತಿಗೆ ಕರಾರನ್ನು ರದ್ದುಗೊಳಿಸಲು ಉದ್ದೇಶಿಸಿ ದಿನಾಂಕ: 27-06-2023 ರಂದು Intent to Terminate ನೋಟೀಸು ಜಾರಿಗೊಳಿಸಿ ಬ್ಯಾಂಕ್ ಗ್ಯಾರಂಟಿಗಳನ್ನು ನಗಧೀಕರಿಸಲು ಕ್ರಮವಹಿಸಲಾಗಿತ್ತು. ಗುತ್ತಿಗೆದಾರರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಪ್ರಸ್ತುತ ಆರ್ಬಿಟ್ರೇಷನ್ ಪ್ರಗತಿಯಲ್ಲಿದೆ.

**5. ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ:**

ದಿನಾಂಕ:10/07/2024 ರಂದು ಜರುಗಿದ 51ನೇ ಅಧಿಕಾರಯುತ ಸಮಿತಿ ಸಭೆಯಲ್ಲಿ ಸ್ಥಳೀಯ ಸಂಸ್ಥೆಯ ಬಾಕಿ ವಂತಿಕೆ ಮೊತ್ತ ಹಾಗೂ ಇತರೆ ಸ್ಥಳೀಯ ಸಂಸ್ಥೆಯ Fund ಬಳಸಿ ಕಾನೂನು ತಜ್ಞರ ಸಲಹೆ ಅನುಸಾರ ಕಾಮಗಾರಿಗಳನ್ನು ಸ್ಥಳೀಯ ಸಂಸ್ಥೆಗಳಿಂದ ಪೂರ್ಣಗೊಳಿಸಲು ಅನುಮೋದಿಸಿರುತ್ತಾರೆ.

ಆರ್ಬಿಟ್ರೇಟರ್ ರವರು ದಿನಾಂಕ:26/05/2025 ರಂದು ಬ್ಯಾಂಕ್ ಗ್ಯಾರಂಟಿಗಳನ್ನು ಜೀವಂತವಾಗಿರಿಸಿಕೊಂಡು, ಆರ್ಬಿಟ್ರೇಷನ್ ಇತ್ಯರ್ಥವಾಗುವವರೆಗೆ ಬ್ಯಾಂಕ್ ಗ್ಯಾರಂಟಿಗಳನ್ನು ನಗದೀಕರಿಸಬಾರದು ಎಂಬ ಷರತ್ತಿಗೊಳಪಟ್ಟು ಬಾಕಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅನುಮತಿ ನೀಡಿರುತ್ತಾರೆ. ಮುಂದಿನ ವಿಚಾರಣಾ ದಿನಾಂಕ:06.04.2026 ರಂದು ಇರುತ್ತದೆ.

ಮೇಲಿನ ಆದೇಶಗಳ ಅನುಸಾರ ಪೌರಾಯುಕ್ತರು, ನಗರಸಭೆ, ಸಿಂಧನೂರು ರವರಿಗೆ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ದಿನಾಂಕ:23/07/2025 ರಲ್ಲಿ KTPP ಮಾನದಂಡಗಳ ಪ್ರಕಾರ ಬಾಕಿ ಕಾಮಗಾರಿಗಳನ್ನು ಸ್ಥಳೀಯ ಸಂಸ್ಥೆಯ ಬಾಕಿ ವಂತಿಕೆ ಹಾಗೂ ಇತರೆ ಸಂಪನ್ಮೂಲಗಳಿಂದ ಸ್ಥಳೀಯ ಸಂಸ್ಥೆಯ ವತಿಯಿಂದಲೇ ಕೈಗೆತ್ತಿಕೊಳ್ಳಲು ಸೂಚಿಸಲಾಗಿದೆ.

ಕಡತ ಸಂಖ್ಯೆ: ನಅಇ 59 ಪಿ.ಆರ್.ಜೆ 2026

**(ಬಿ. ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನಾ
ಸಚಿವರು